ಕಥೆ



ಸರಿಯಾಗಿ ತಲೆಯ ಮೇಲೆ ಕೂತಿರದಿದ್ದರೆ ತಾನೇ ಸರಿಯಾಗಿ ಕೂರಿಸುವಳು.

ದನಕರುಗಳಿಗೆ ಹೊರಗಿನಿಂದ ಹುಲ್ಲನ್ನು ತರುತ್ತಿರುವಾಗ, 'ನಿನಗೆ ಹೊರೆ ಭಾರವಾಯ್ತು ಅನಿಸ್ತಾ ಇದೆಯಾ? ಸ್ವಲ್ಪ ಸುಧಾರಿಸಿಕೋತೀಯಾ? ನಾನೂ ಸ್ವಲ್ಪ ದೂರ ತಗೊಳ್ಲಾ? ಎಂದು ನಾದಿನಿಯನ್ನು ಕೇಳುವಳು.

ಹುಡುಗಿಯ ತಲೆಯ ಮೇಲಿನ ಹೊರೆಯ ಭಾರವೂ ಕಡಿಮೆಯಾಗಿತ್ತಲ್ಲದೆ, ಅವಳ ಅತ್ತಿಗೆಯು ತನ್ನ ಪ್ರೀತಿಯ ಮಾತುಗಳಿಂದ ಅದರ ತೂಕವನ್ನು ಇನ್ನಷ್ಟು ಕಡಿಮೆ ಮಾಡಿದ್ದಳು.

ನಾಲ್ಕು ತಿಂಗಳ ನಂತರ ಅವಳ ಅತ್ತೆಯಷ್ಟೇ ಅಲ್ಲ, ಗಂಡನೂ ಸಹ, 'ಇವಳು ಈಗ ನಿಜವಾಗಿ ಬದಲಾಯಿಸಿದ್ದಾಳೆ' ಎಂದು ಸಮಾಧಾನಪಟ್ಟರು.

ಒಮ್ಮೆ ಮನೆಯಲ್ಲಿ ಅವನ ತಾಯಿ ಹಾಗೂ ಇತರರು ಆ ಯುವಕನ ವಿಷಯವಾಗಿ ಮಾತನಾಡಲು ಆರಂಭಿಸಿದಾಗ ಅವಳು ಆ ಮಾತುಗಳನ್ನು ಕೇಳಿಸಿಕೊಳ್ಳಲು ಕೂಡ ಮನೆಯಲ್ಲಿ ನಿಲ್ಲಲಿಲ್ಲ. ಸುಮ್ಮನೆ ತನ್ನ ನಾದಿನಿಯನ್ನು ಜೊತೆಯಲ್ಲಿ ಕರೆದುಕೊಂಡು ಹೊಲಕ್ಕೆ ಹೋದುದನ್ನು ಅವಳ ಗಂಡನು ಗಮನಿಸಿದ.

ಇವೆಲ್ಲಕ್ಕಿಂತ ಮಿಗಿಲಾಗಿ ಅವಳು ರಾತ್ರಿಯಲ್ಲಿ ಮಾಡಿದ ಕೆಲಸಗಳು ದೃಢಪಡಿಸಿದ್ದೆಂದರೆ... ಮೊದಮೊದಲು ಅವಳು ತನ್ನ ಮನೆಯ ಕೆಲಸಗಳಲ್ಲಿಯೇ ತೊಡಗಿ, ರಾತ್ರಿಯ ಹೊತ್ತು ತನ್ನ ಗಂಡನಿಗಾಗಲೀ, ಅತ್ತೆಗಾಗಲೀ ಹಾಸುಗೆಯನ್ನು ಹಾಸುತ್ತಿರಲಿಲ್ಲ. ಬೆಳಗ್ಗೆ ಎಲ್ಲ ಹಾಸುಗೆಗಳನ್ನು ಸುತ್ತಿಟ್ಟಿದ್ದರೂ ತನ್ನ ಹಾಸುಗೆಯನ್ನು ಹಾಗೆಯೇ ಬಿಟ್ಟಿರುತ್ತಿದ್ದಳು. ಆ ಸಮಯದಲ್ಲಿ ಸಾಮಾನ್ಯವಾಗಿ ಮಲಗಿರುತ್ತಿದ್ದ ಅವಳ ಗಂಡ ತನ್ನ ಪಕ್ಕದ ಹಾಸುಗೆ ಹಾಗೆಯೇ ಹರಡಿಕೊಂಡಿರುವುದನ್ನು ಗಮನಿಸಿದ್ದ.

ಆದರೆ ಈಗ ಉಳಿದವರಿನ್ನೂ ಊಟ ಮಾಡುತ್ತಿರುವಾಗಲೇ ಅವಳು ತನ್ನೆಲ್ಲಾ ಮನೆಗೆಲಸಗಳನ್ನೂ ಮುಗಿಸಿ ನಾಲ್ಕೂ ಹಾಸುಗೆಗಳನ್ನು– ಎರಡು ಮನೆಯ ಮುಂಭಾಗದಲ್ಲಿಯೂ, ಉಳಿದೆರಡನ್ನೂ ಅಂಗಳದ ಎದುರಿನ ರೂಮಿನಲ್ಲಿಯೂ ಹಾಸುತ್ತಿದ್ದಳು.

ತನ್ನ ಅತ್ತೆಯು ನೆರೆಯವರೊಂದಿಗೆ ಮುಂದಿನ ಕೊಠಡಿಯಲ್ಲಿ ಹರಟೆ ಹೊಡೆಯುತ್ತಿದ್ದರೆ ಅವಳು ಸುಮ್ಮನೆ ವರಾಂಡದ ರೂಮಿಗೆ ಬರುತ್ತಿದ್ದಳು...

ಹಿಂದಿನ ದಿನಗಳಲ್ಲಿ, ಅವಳ ಗಂಡನೇನಾದರೂ ಹೊಡೆದರೆ, ಒಂದು ವಾರದವರೆಗೂ ಅವನೊಡನೆ ಮಾತನ್ನೇ ಆಡುತ್ತಿರಲಿಲ್ಲ, ಅವನೇನಾದರೂ ಬೈದರೆ ಎರಡು ದಿನ ಮಾತು ಬಿಟ್ಟು ಬಿಡುತ್ತಿದ್ದಳು. ಅವನೇನಾದರೂ-ಎಂದಿನಂತೆ-ಹಲ್ಲುಗಳನ್ನು ಕಡಿದರೆ ಅವಳೂ ಮುನಿಸಿಕೊಳ್ಳುತ್ತಿದ್ದಳು. ಒಂದು ಸಲವೂ ಗಂಡನ ಹಾಸುಗೆಗೆ ಹೋಗುತ್ತಿರಲಿಲ್ಲ.

ಆದರೆ ಈಗ, ನೇರವಾಗಿ ಗಂಡನ ಹಾಸುಗೆಗೆ ಹೋಗಿ ಮೈಚಾಚುವಳು.

ಅವಳ ಈ ನಡೆವಳಿಕೆಗಳನ್ನು ಕಂಡ ಅವಳ ಗಂಡನು ಅವಳಲ್ಲಿ ವಿಶ್ವಾಸವನ್ನು ತಾಳಿ ಒಂದು ರಾತ್ರಿ, 'ನಿಜ ಹೇಳು, ನಿನ್ನ ತವರಿನವರ ಮೇಲೆ ಆಣೆಯಿಟ್ಟು ಹೇಳು' ಎಂದು ಕೇಳಿದ.

ಅವಳು ನಡುವೆಯೇ, 'ನಾನು ತಡವಾಗಿ ನನ್ನ ತವರಿಗೆ ಹೋಗಿದ್ದೀನಾ?' ಎಂದು ಕೇಳಿದಳು.

'ಆಮೇಲೆ...' ಅವನು ತನ್ನ ಮೇಲೇಯೇ ಆಣೆಯಿಟ್ಟು ಹೇಳು ಎಂದು ಕೇಳಲು ಹೋದ. ಆದರೆ ಅವನ ನಂಬಿಕೆ ಆ ಮಟ್ಟಕ್ಕೆ ಹೋಗಿರಲಿಲ್ಲ. 'ನಿನಗೆ ಯಾರ ಮೇಲೆ ಇಷ್ಟವೋ ಅವರ ಮೇಲೆ ಆಣೆಯಿಟ್ಟು ಹೇಳು' ಎಂದ.

'ನಾನ್ಯಾಕೆ ಆಣೆಯಿಡಬೇಕು?'

ಅವನಿಗೆ ಅವಳ ಮೊದಲ ಪ್ರಶ್ನೆಗಿಂತ ಎರಡನೆಯದೇ